**O. S. No:68/2019**
**DW:1**

(ಇಂದು ದಿನಾಂಕಃ **22-04-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ವಾಯ್ ಎಂ ಪಿ ವಕೀಲರಿಂದಃ**

ನಾನು ಅನಕ್ಷರಸ್ಥ. ನನ್ನ ತಂದೆಯ ಹೆಸರು ಯಲ್ಲಪ್ಪ ಭೀಮಪ್ಪ ಹಟಗಾರ. ಸದರಿಯವರು ದಿನಾಂಕಃ 07-10-2007 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಾಯಿಯ ಹೆಸರು ಯಲ್ಲವ್ವ ಹಾಗೂ ಸದರಿಯವರು ದಿನಾಂಕಃ 07-02-2016 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ನಾನು, 1, 3 ರಿಂದ 5 ನೇ ವಾದಿಯರು, 7 ನೇ ವಾದಿ, 1 ಮತ್ತು 2 ನೇ ಪ್ರತಿವಾದಿಯರು ಹಾಗೂ ಬಸಪ್ಪ ಮಕ್ಕಳಿರುತ್ತೇವೆ ಎಂದರೆ ಸರಿ. ಸದರಿಯವರ ಪೈಕಿ ಬಸಪ್ಪ ಮೃತಪಟ್ಟಿರುತ್ತಾನೆ ಎಂದರೆ ಸರಿ. ಸದರಿಯವನಿಗೆ ವಾದಿ 2(a) ದಿಂದ 2(e) ನೇದ್ದವರು ಆತನ ವಾರಸುದಾರರು ಎಂದರೆ ಸರಿ. ಸದರಿಯವರನ್ನೆಲ್ಲಾ ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಸಂಬಂಧಿಸಿ ಬೇರೆ ಯಾರು ಇರುವುದಿಲ್ಲ.

2. ನನ್ನ ತಂದೆ 1969 ರಲ್ಲಿ ಜಮೀನು ಸರ್ವೆ ನಂಃ 122/1 ಕ್ಷೇತ್ರ 4 ಎಕರೆ 39 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಸದರಿಯವರು ಮೃತಪಟ್ಟ ನಂತರ ವಾದಿಯರು ಹಾಗೂ 1 ಮತ್ತು 2 ನೇ ಪ್ರತಿವಾದಿಯರ ಹೆಸರು ಜಮೀನಿನ ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಒಕ್ಕಲುತನ ಹೊರತುಪಡಿಸಿ ನಾನು ಬೇರೆ ಉದ್ಯೋಗ ಮಾಡುವುದಿಲ್ಲ ಎಂದರೆ ಸಾಕ್ಷಿಯು ಕುರಿ ಕಾಯುವುದು ಹಾಗೂ ಹೊಲವನ್ನು ಲಾವಣಿ ರೂಪದಲ್ಲಿ ಸಾಗುವಳಿ ಮಾಡುತ್ತೇನೆಂದು ಎಂದು ನುಡಿದಿರುತ್ತಾರೆ. ನನ್ನ ಬಳಿ ಅಂದಾಜು 2,000 ಕುರಿಗಳು ಇದ್ದವು. ಸದರಿ ಅಂಶ ತೋರಿಸಲು ದಾಖಲೆ ಇರುವುದಿಲ್ಲ. ಲಾವಣಿಗೆ ಸಂಬಂಧಿಸಿ ದಾಖಲೆ ಸಹ ಇರುವುದಿಲ್ಲ. ಸದರಿ ಅಂಶಗಳನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಶೆಡ್ಯೂಲ್ ಬಿ ದ್ದರ ಜಮೀನುಗಳಾದ ಸರ್ವೆ ನಂಃ 554/1, 554/2, 554/4 ಹಾಗೂ 578/1 ಕೆ ನೇದ್ದವುಗಳನ್ನು ಸರ್ವೆ ನಂಃ 122/1 ರ ಜಮೀನಿನಿಂದ ಬಂದ ಆದಾಯದಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಸ್ವಂತ ದುಡಿಮೆಯಿಂದ ಖರೀದಿಸಿರುತ್ತೇನೆ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಗೆ 4 ನೇ ಪ್ರತಿವಾದಿಯ ಮಗಳನ್ನು ವಿವಾಹ ಮಾಡಿಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕಾರಣ 4 ನೇ ವಾದಿ 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿ ವಿ ಪಿ ಸಿ ಸಂಃ 647/51 ನೇದ್ದನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿ ಆತನ ಸ್ವಂತ ದುಡಿಮೆಯಿಂದ ಸದರಿ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದು ನುಡಿದಿರುತ್ತಾರೆ. 2 ನೇ

ಪ್ರತಿವಾದಿ ಆಸ್ತಿ ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ಸದರಿ ಆಸ್ತಿಯನ್ನು 3 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಸದರಿ ಆಸ್ತಿಯನ್ನು ಖರೀದಿಸಿ ನಂತರ 3 ನೇ ಪ್ರತಿವಾದಿಯ ಹೆಸರಿನಲ್ಲಿ ವರ್ಗಾವಣೆ ಮಾಡಿರುತ್ತಾನೆ.

4. 1 ನೇ ವಾದಿಯನ್ನು ಹೆಬ್ಬಾಳ ಗ್ರಾಮದ ಯಲ್ಲಪ್ಪ ಬೆಳಹಾರ ರವರಿಗೆ ವಿವಾಹ ಮಾಡಿಕೊಡಲಾಗಿದೆ ಎಂದರೆ ಸರಿ. ನಂತರ ಸದರಿಯವರ ನಡುವೆ ವಿವಾಹ ವಿಚ್ಛೇಧನವಾಗಿರುತ್ತದೆ ಎಂದರೆ ಸರಿ. ನಂತರ ಸದರಿ ಯಲ್ಲವ್ವ ಹೆಬ್ಬಾಳ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ಸದರಿಯವಳು ತನ್ನ ಜೀವನೋಪಾಯಕ್ಕಾಗಿ 5-6 ಎಮ್ಮೆ ಹಾಗೂ 10 ಕುರಿಗಳನ್ನು ಸಾಕಿಕೊಂಡು ಇದ್ದಾರೆ ಎಂದರೆ ಸರಿ. ಸದರಿಯವಳು ಸದರಿ ಎಮ್ಮೆ ಹಾಗೂ ಕುರಿಗಳನ್ನು ಮಾರಾಟ ಮಾಡಿ ವಿ ಪಿ ಸಿ ಸಂಃ 538 ನ್ನು ಖರೀದಿಸಿರುತ್ತಾರೆ ಎಂದರೆ ಸರಿ. 6 ನೇ ವಾದಿ 8-10 ವರ್ಷಗಳ ಹಿಂದೆ ಗೋವಾಕ್ಕೆ ದುಡಿಯಲು ಹೋಗಿದ್ದ ಎಂದರೆ ಸರಿಯಲ್ಲ. ಸದರಿಯವನು ಸದರಿ ದುಡಿಮೆಯಿಂದ ವಿ ಪಿ ಸಿ ಆಸ್ತಿ ಸಂಃ 632/35 ಹಾಗೂ 633/36 ಗಳನ್ನು ಖರೀದಿಸಿರುತ್ತಾನೆ ಎಂದರೆ ಸಾಕ್ಷಿಯು ಜಮೀನು ಸರ್ವೇ ನಂಃ 122/1 ಕ್ಷೇತ್ರ 4 ಎಕರೆ 39 ಗುಂಟೆ ಜಮೀನಿನ ಆದಾಯದಿಂದ ಖರೀದಿಸಿರುತ್ತಾನೆ ಎಂದು ನುಡಿದಿರುತ್ತಾರೆ. ಸದರಿ ಜಮೀನನ್ನು ಸಾಗುವಳಿ ಮಾಡಿ ನಾನೇ ಅದರ ಆದಾಯ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. 6 ನೇ ವಾದಿಯ ಹೆಂಡತಿ ಶಿಕ್ಷಕಿ ಇದ್ದಾರೆ ಎಂದರೆ ಸರಿ. ಸದರಿಯವರ ಆದಾಯದಿಂದ 6 ನೇ ವಾದಿ ಮನೆ ಕಟ್ಟಿಸಿರುತ್ತಾನೆ ಎಂದರೆ ಸಾಕ್ಷಿಯು ಜಮೀನು ಸರ್ವೇ ನಂಃ 122/1 ಕ್ಷೇತ್ರ 4 ಎಕರೆ 39 ಗುಂಟೆ ಜಮೀನಿನ ಆದಾಯದಿಂದ ಖರೀದಿಸಿರುತ್ತಾನೆ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು 2019 ರಲ್ಲಿ ದಾವಾ ಆಸ್ತಿಗಳಲ್ಲಿ ಪಾಲು ಕೊಡುವಂತೆ ನನಗೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಪಾಲು ಕೊಡದ ಕಾರಣ ವಾದಿಯರು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಪಾಲು ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**